ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

DOF TECHO RAMK/70/2021 ಮೀನುಗಾರಿಕೆ ನಿರ್ದೇಶನಾಲಯ

E-502966 ಪೋಡಿಯಂ ಬ್ಲಾಕ್ , 3ನೇ ಮಹಡಿ, ವಿ.ವಿ. ಕೇಂದ್ರ

ಬೆಂಗಳೂರು ದಿನಾಂಕ 4-8-2021

**ಸುತ್ತೋಲೆ**

ವಿಷಯ:ಮತ್ಸ್ಯಾಶ್ರಯ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು

ಉಲ್ಲೇಖ: ಈ ಕಛೇರಿಯ ಸುತ್ತೋಲೆ ಸಂಖ್ಯೆ DOF TECHO RAMK/61/2021 ದಿನಾಂಕ 7-6-2021

***

1) ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2014-15 ನೇ ಸಾಲಿನಿಂದ 2017-18ನೇ ಸಾಲಿನಲ್ಲಿ ಅನುಮೋದನೆ ಗೊಂಡು ಕಾಮಗಾರಿ ಪ್ರಾರಂಭಿಸಿ ವಿವಿಧ ಹಂತದಲ್ಲಿರುವ ಮನೆಗಳ ಫಲಾನುಭವಿಗಳಿಗೆ ನೋಂದಣಿ ಅಂಚೆ ಪತ್ರ ಬರೆದು ಅಕ್ಟೋಬರ್ 31ರ ಒಳಗೆ ಪೂರ್ಣಗೊಳಿಸಿಕೊಳ್ಳಲು ಸೂಚಿಸುವುದು. ತಪ್ಪಿದಲ್ಲಿ ಈಗಾಗಲೇ ಪಾವತಿ ಮಾಡಿರುವ ಅನುದಾನವನ್ನು ಭೂ ಕಂದಾಯ ರೀತ್ಯಾ ವಸೂಲಿ ಮಾಡಲಾಗುವುದೆಂದು ತಿಳಿಸುವುದು.

2) ಮೇಲೆ ತಿಳಿಸಿರುವ ಫಲಾನುಭವಿಗಳು ಮನೆಗಳನ್ನು ಪೂರ್ಣಗೊಳಿಸಿದ್ದಲ್ಲಿ ಅನುಧಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಕೆ.ಎಫ್.ಡಿ.ಸಿ ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು 15-10-2021ರೊಳಗೆ ಸಲ್ಲಿಸತಕ್ಕದ್ದು, ನವಂಬರ್ 15ರ ನಂತರ ಬಂದ ಪ್ರಸ್ತಾವನೆಗಳಿಗೆ ಕೆ.ಎಫ್.ಡಿ.ಸಿಯಿಂದ ಅನುದಾನ ಬಿಡುಗಡೆ ಮಾಡದಿರಲು ತಿಳಿಸಿದೆ

3) 2018-19ನೇ ಸಾಲಿನಲ್ಲಿ 16-6-2020ರಂದು 1575 ಮನೆಗಳನ್ನು ಹಾಗೂ 15-1-2021 ರಂದು 820 ,ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಈ ಮನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೆಳಗಿನಂತೆ ಪರಿಷ್ಕೃತ ಗಡುವು ನಿಗದಿಪಡಿಸಿದೆ

| | | |
|---|---|---|
| 1 | ತಾಲ್ಲೂಕು ಮಟ್ಟದ ಅಧಿಕಾರಿ ಫಲಾನುಭವಿಗಳ ಪಟ್ಟಿಯನ್ನು ಪಡೆದು ದಾಖಲಾತಿಗಳೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಲು ಕೊನೆ ದಿನಾಂಕ | 30-9-2021 |
| 2 | ಜಿಲ್ಲಾ ಮಟ್ಟದ ಅಧಿಕಾರಿ ಅನುಮೋದನೆ ನೀಡಲು ಕೊನೆಯ ದಿನಾಂಕ | 20-10-2021 |
| 3 | ಫಲಾನುಭವಿ ಮನೆಯ ಕಾಮಗಾರಿ ಪೂರ್ಣಗೊಳಿಸಲು ಕೊನೆಯ ದಿನಾಂಕ | 15-2-2022 |
| 4 | ಅನುದಾನ ಬಿಡುಗಡೆ ಕೋರಿ ಕೆ.ಎಫ್.ಡಿ.ಸಿ ಗೆ ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ | 30-2-2022 |

ನಿಗದಿಪಡಿಸಿದ 30-2-2022ರ ನಂತರದಲ್ಲಿ ಬಂದ ಪ್ರಸ್ತಾವನೆಗಳಿಗೆ ಕೆ.ಎಫ್.ಡಿ.ಸಿಯಿಂದ ಅನುದಾನ ಬಿಡುಗಡೆ ಮಾಡಬಾರದೆಂದು ಸಹ ತಿಳಿಸಿದೆ.

ಮೀನುಗಾರಿಕೆ ನಿರ್ದೇಶಕರು

4/8/2021 Kuls DM/cy

PTO

ಗೆ

ವಂದನೆಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಹೊಯ್ಗೆ ಬಜಾರ, ಮಂಗಳೂರುರವರಿಗೆ ಕಳುಹಿಸಿದೆ.

ಎಲ್ಲಾ ಮೀನುಗಾರಿಕೆ ಹಿರಿಯ ಉಪನಿರ್ದೇಶಕರುಗಳು

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು

ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರುಗಳು

ಪ್ರತಿ ಆದೇಶದ ಕಡತಕ್ಕೆ

ಪ್ರತಿ ಕಡತ ಸಂಖ್ಯೆ DOF TECHO RAMK/61/2021

ಪ್ರತಿ ಕೇಂದ್ರ ಕಛೇರಿ ಕಂಪ್ಯೂಟರ್ ಸಂಕಲನಕ್ಕೆ ಸೂಕ್ತ ಕ್ರಮಕ್ಕಾಗಿ